ಎರಡನೆಯದಾಗಿ ಶಿವಮೂರ್ತಿಯವರು ಅಪಾಯಿಂಟ್ ಆದ ಎರಡು ವರ್ಷಗಳಲ್ಲಿ ಎಕ್ಸಾಮಿನೇಷನ್ ಪೂರ್ಣ ಮಾಡಿಕೊಳ್ಳಬಹುದಾಗಿತ್ತು. ಆದರೆ ಅವರು ಮಾಡಿಕೊಳ್ಳಲಿಲ್ಲ. ಆದ್ದರಿಂದ ಸರ್ಕಾರ ಪುನಃ ಒಂದು ವರ್ಷ ಅವಧಿಯನ್ನು ವಿಸ್ತರಣೆ ಮಾಡಿತು. ಆ ಅವಧಿಯಲ್ಲೂ ಅವರು ಪಾಸ್ ಮಾಡಿಕೊಳ್ಳಲಿಲ್ಲ. ಪುನಃ ರಿಕ್ವೆಸ್ಟ್ ಮಾಡಿಕೊಂಡಿದ್ದರೆ ಸರ್ಕಾರ ಡಿಸ್ಪೆನ್ಷನರಿ ಪವರ್ ಮೇಲೆ ಒಂದು ವರ್ಷ ಅಥವಾ ಆರು ತಿಂಗಳು ಎಕ್ಸ್‌ಟೆಂಡ್ ಮಾಡಬಹುದಾಗಿತ್ತು. ಆದರೆ ಅವರು ಮಜಾ ಆದ ಮೇಲೆ ಅರ್ಜಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಪುನರ್ ನೇಮಕ ಮಾಡಿಕೊಳ್ಳಲು ಕಾನೂನು ಪ್ರಕಾರ ಮೆರಿಟ್ ಮೇಲೆ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬಗ್ಗೆ ದುಃಖವೇನೂ ಇಲ್ಲ. ಸಂತೋಷವಾಗಿದೆ. ಆದರೆ ಅಧಿಕಾರಿಗಳು ಅವರನ್ನು ಕೆಲಸದಿಂದ ತೆಗೆದುಹಾಕಿರುವುದರಿಂದ ಅವರಿಗಾಗಲಿ, ಅವರ ಕುಟುಂಬದವರಿಗಾಗಲಿ ಜೀವನದಲ್ಲಿ ತೊಂದರೆಯಾಗಿದೆ. ಅವರು ಪರಿಜನ ಅಭ್ಯರ್ಥಿಯಾಗಿದ್ದಾರೆ. ಅವರು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ೧೯೫೭ರ ಪ್ರಕಾರ ಮೇಲ್‌ಮನವಿಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಅಧಿಕಾರಿಗಳ ವರದಿ ಬರುವುದಕ್ಕೆ ಮುಂಚಿತವಾಗಿ ಸಂಬಂಧಪಟ್ಟ, ಮೇಲಾಧಿಕಾರಿಗಳು ಪರಿಶಿಷ್ಟ ವರ್ಗದವರೆಂದು, ಜೊತೆಗೆ ಬಹಳ ಕೀಳುದೃಷ್ಟಿಯಿಂದ ಅವರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಆದ್ದರಿಂದ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಡಿಪಾರ್ಟ್‌ಮೆಂಟಲ್ ಪರೀಕ್ಷೆ ಪಾಸ್ ಮಾಡಬೇಕು ಎನ್ನುವ ಅನುಕಂಪದ ಆಧಾರದ ಮೇಲೆ ಬಂದರೂ ಕೂಡ ಪಕ್ಷಾತೀತ ಮಾಡಿದಂತಾಗುತ್ತದೆ. ಆದ್ದರಿಂದ ಶಿವಮೂರ್ತಿಯವರ ಮೇಲೆ ಅನುಕಂಪವನ್ನು ತೋರಿ, ಬಡವರಾದ ಅವರನ್ನು ನೇಮಕ ಮಾಡಿಕೊಳ್ಳುವ ವರದಿ ಬಂದಿಲ್ಲ ವರದಿಯನ್ನು ತರಿಸಿಕೊಂಡು ಆ ವ್ಯಕ್ತಿಯನ್ನು ಪುನರ್ ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೇ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಆದನ್ನು ಪರಿಶೀಲನೆ ಮಾಡುತ್ತೇನೆ.

ಆಡಳಿತ ಸೇವಾ ವಿಷಯ ಕುರಿತು.

೧೬೯೮. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಹುದ್ದೆಯು ಎಂದಿನಿಂದ ಖಾಲಿ ಇದೆ ?

ಇ) ಇದನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 'ಮುಖ್ಯ ಕಾರ್ಯದರ್ಶಿ' ಹುದ್ದೆಯು ಈಗ ಖಾಲಿ ಇರುವುದಿಲ್ಲ.

ಆ) —ಉದ್ಭವಿಸುವುದಿಲ್ಲ—

ಇ) —ಉದ್ಭವಿಸುವುದಿಲ್ಲ—

ಶ್ರೀ ಐ.ಬಿ. ಶಂಕರ್.—ಅಧ್ಯಕ್ಷರೆ,

ಅಧ್ಯಕ್ಷರು.—ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿಯವರ ಹುದ್ದೆ ಖಾಲಿ ಇಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸಿರುತ್ತಾರೆ. ಖಾಲಿ ಇಲ್ಲವೆಂದು ಹೇಳಿದ ಮೇಲೆ ಮುಗಿಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾವು ಒಬ್ಬ ಮುಖ್ಯ ಕಾರ್ಯದರ್ಶಿಯವರನ್ನು ನೇಮಕ ಮಾಡಿದ್ದೆವು. ಅವರು ಅಲ್ಲಿ ಸುಮಾರು ೭ ತಿಂಗಳಾಯಿತು ಎಂದು ಕಾಣುತ್ತದೆ. ಅವರ

ಸೇವೆ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಅಪ್ಪೊಂದು ಸವಾಧಾನಕರವಾಗಿರಲಿಲ್ಲ. ಅವರು ಅಲ್ಲಿ ಇರುತ್ತಲೇ ಇರಲಿಲ್ಲ. ಜಿಲ್ಲಾ ಮುಖ್ಯ ಕಾರ್ಯದರ್ಶಿಯಾಗಿ ನಾವು ನೇಮಕ ಮಾಡತಕ್ಕಂಥವರು ಅಲ್ಲಿ ಹೊಂದುಕೊಂಡು ಹೋಗಬೇಕು. ಡೆವಲಪ್‌ಮೆಂಟಲ್ ದೃಷ್ಟಿ ಅವರಲ್ಲಿ ಇರಬೇಕು, ಟೆಂಪರ್‌ಮೆಂಟ್ ಸರಿಯಾಗಿ ಇರಬೇಕು. ಅದೆಲ್ಲ ಸರಿಯಾಗಿ ಇರಬೇಕು. ಇದಾದಮೇಲೆ ಶ್ರೀ ಚಂದ್ರಕೀರ್ತಿ ಎಂದು ಹೇಳಿ ಒಬ್ಬರನ್ನು ಕೇಂದ್ರ ಸರ್ಕಾರದಿಂದ ಎರವಲು ಮೇಲೆ ಕಳಿಹಿಸಿ ಕೊಡಬೇಕೆಂದು ಅವರ ಬಗ್ಗೆ ಆರ್ಡರ್ಸ್‌ನ್ನು ಪಾಸ್ ಮಾಡಿದೆವು. ಆದರೆ ಕೇಂದ್ರ ಸರ್ಕಾರದವರು ಅವರನ್ನು ರಿಲೀವ್ ಮಾಡಲಿಲ್ಲ. ಆದ್ದರಿಂದ ಮೂರನೆಯವರನ್ನು ಹಾಕಬೇಕಾದಂಥ ಪರಿಸ್ಥಿತಿ ಬಂದಿತು. ಅವರನ್ನು ಹಾಕಿದ ಮೇಲೆ ಅವರು ಒಂದು ತಿಂಗಳು ರಜದಮೇಲೆ ಹೋದರು. ಆದ್ದರಿಂದ ಜಿಲ್ಲಾ ಪರಿಷತ್ತಿಗೆ ಸ್ವಲ್ಪ ತೊಂದರೆಯಾಗಿದೆ. ಈಗ ಅವರು ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಐ.ಬಿ. ಶಂಕರ್.—ಅಲ್ಲಿ ಉಪ ಕಾರ್ಯದರ್ಶಿಯವರ ಹುದ್ದೆ ಖಾಲಿ ಇದೆ. ದಯವಿಟ್ಟು ಕೂಡಲೇ ಅದನ್ನು ಭರ್ತಿ ಮಾಡಿಕೊಡಬೇಕು. ಸರ್ಕಾರ ಒಪ್ಪುವುದಾದರೆ ಎಲ್ಲಾ ಶಾಸಕರು ಕೂಡಿ ಇಂಥ ವ್ಯಕ್ತಿಯನ್ನು ಹಾಕಬೇಕೆಂದು ಬರೆದು ಕೊಡುತ್ತೇವೆ. ಆ ವ್ಯಕ್ತಿಯನ್ನು ಹಾಕಿದರೆ ಉತ್ತಮವಾದ ಕೆಲಸವಾಗುತ್ತದೆಂಬ ನಂಬಿಕೆ ಇರುವುದರಿಂದ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಪರಿಶೀಲಿಸುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಒಳ್ಳೆಯ ಉಪ ಕಾರ್ಯದರ್ಶಿಯವರನ್ನು ಹಾಕುತ್ತೇನೆ.

ರಾಷ್ಟ್ರಪಟ್ಟದ ನಾಯಕರುಗಳಿಗೆ ಕೊಟ್ಟಿರುವ ಮನೆಗಳ ಬಗ್ಗೆ.

೧೨೧೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಂತ್ರಿಗಳಿಗೆ ವಾಸಕ್ಕಾಗಿ ನೀಡಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಮಂತ್ರಿಗಳಲ್ಲದೆ ಬೇರೆಯವರಿಗೆ ಸರ್ಕಾರಿ ಅಧಿಕೃತ ನಿವಾಸಗಳನ್ನು ಕೊಟ್ಟಿರುವುದು ನಿಜವೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೭

ಆ) ಹೌದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ರಾಜ್ಯದಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು? ಈ ಸದನದಲ್ಲಿರತಕ್ಕ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಖ್ಯೆ ಎಷ್ಟು? ಸರ್ಕಾರದ ಮನೆಗಳ ಸಂಖ್ಯೆ ಎಷ್ಟು? ಬೇರೆ ಮನೆಯಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು? ಮತ್ತು ಅದಕ್ಕೆ ಬಾಡಿಗೆ ಎಷ್ಟು? ಸರ್ಕಾರಕ್ಕೆ ಬಾಡಿಗೆಯಿಂದ ಬರತಕ್ಕ ವೆಚ್ಚ ಎಷ್ಟು? ದಯವಿಟ್ಟು ಹೆಸರಿನೊಂದಿಗೆ ಎವರ ಹೆಸರಿದರೆ ನನಗೆ ಆನಂದವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಂತ್ರಿಮಂಡಲದಲ್ಲಿ ಎಷ್ಟು ಮಂದಿ ಸದಸ್ಯರಿದ್ದಾರೆಂದು ಎಲ್ಲರಿಗೂ ಗೊತ್ತಿದೆ, ಅದನ್ನು ಬಿಡಿಸಿ ಹೇಳಬೇಕಾಗಿಲ್ಲ. ಈಗ ರಾಜ್ಯ ಮಂತ್ರಿಗಳಲ್ಲಿ ೯ ಮಂದಿ ಮಂತ್ರಿಗಳಿಗೆ ಸರ್ಕಾರಿ ಆಕಾಮಡೇಷನ್ ಕೊಟ್ಟಿದ್ದೇವೆ. ಮೂರು ಜನ ಮಂತ್ರಿಗಳು ತಮ್ಮ ಸ್ವಂತ ನಿವಾಸದಲ್ಲಿದಾರೆ; ಮುಖ್ಯ ಮಂತ್ರಿಗಳು, ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು. ಕೆಲವರು ಎಲ್.ಹೆಚ್.ನಲ್ಲಿ ಇದ್ದಾರೆ. ಮತ್ತೆ ಕೆಲವರು ಕುಮಾರ ಕೃಪದಲ್ಲಿದ್ದಾರೆ. ಮಾನ್ಯ ಮಲ್ಲಾರಿಗೌಡರ ಪ್ರಶ್ನೆ ಹೊರಗಿನ ಜನ ಇಲ್ಲಿ ಯಾರಿದ್ದಾರೆಂದು. ಹೊರಗಿನವರಿಗೆ ಕೊಟ್ಟಿರತಕ್ಕದ್ದು, ಕೇವಲ ಹಿಂದಿನ ನಮ್ಮ ರಾಷ್ಟ್ರಪತಿಗಳಾದ ಶ್ರೀ ಸಂಜೀವರೆಡ್ಡಿಯವರಿಗೆ ಒಂದು ಮನೆ ಕೊಟ್ಟಿದ್ದೇವೆ. ಅವರು ಇನ್ನೂ ಇಲ್ಲಿ ನೆಲಸುವುದಕ್ಕೆ ಪ್ರಾರಂಭ ಮಾಡಿಲ್ಲ, ಮುಂದಿನ ತಿಂಗಳು ಬರುತ್ತಾರೆ.